ಆ) ಸನ್ನದು ಮಂಜೂರಾಗಿರುವ ವ್ಯಕ್ತಿಗಳ ಹೆಸರು ಹಾಗೂ ವಿಳಾಸ ಈ ಕೆಳಕಂಡಂತಿರುತ್ತದೆ.

1. ದೇವೇಂದ್ರಪ್ಪ ಯಮನಪ್ಪ ಗುತ್ತೇದಾರ್, ಸಿಎಲ್–2 ಸನ್ನದುದಾರರು, ಟಿಎಂಸಿ ನಂ–759, ದೇವರಹಿಪ್ಪರಗಿ.
2. ಶ್ರೀಮತಿ. ಯಂಕಮ್ಮಾದೇವಿ, ದೇವೇಂದ್ರಪ್ಪಾ ಗುತ್ತೇದಾರ ಸಿಎಲ್–2 ಸನ್ನದುದಾರರು, ಸಿಟಿಎಸ್ ನಂ–704, ದೇವರಹಿಪ್ಪರಗಿ.
3. ಮಾನೋಜಿ ಜಂಪಣ್ಣಾ ತೊರಗಲ್ ಸಿಎಲ್–2 ಸನ್ನದುದಾರರು, ಆಸ್ತಿ ನಂ.32, ಪಂಚಾಯತ ವಾಣಿಜ್ಯ ಕಟ್ಟಡ ಸಂಕೀರ್ಣ ಅಂಗಡಿ ನಂ.32, ದೇವರಹಿಪ್ಪರಗಿ.
4. ರಾಮಕೃಷ್ಣ ಎಸ್. ಕಲಕೇರಿ, ಸಿಎಲ್–2 ಸನ್ನದುದಾರರು, ಆಸ್ತಿ ನಂ.1337, ಕಲಕೇರಿ ಗ್ರಾಮ.
5. ಪ್ರಕಾಶ ಮರಿಯಪ್ಪಾ ಕಟ್ಟೀಮನಿ ಸಿಎಲ್–2 ಸನ್ನದು ದಾರರು, ವಿಪಿಸಿ ನಂ.119, ಕಲಕೇರಿ ಗ್ರಾಮ

ಇ) ಬಂದಿದೆ.

ಈ) ದೇವರಹಿಪ್ಪರಗಿ ಕ್ಷೇತ್ರ ವ್ಯಾಪ್ತಿಯ ಅನಧಿಕೃತವಾಗಿ ಮದ್ಯ ಮಾರಾಟ ಮಾಡುತ್ತಿರುವ ದೇವರಹಿಪ್ಪರಗಿ ಗ್ರಾಮದಲ್ಲಿ 02 ಪ್ರಕರಣಗಳು ಮತ್ತು ಪಡಗಾನೂರ ಗ್ರಾಮದಲ್ಲಿ ಒಂದು ಪ್ರಕರಣವನ್ನು ದಾಖಲಿಸಿ, ಸದರಿ ಮೂರು ಪ್ರಕರಣಗಳಲ್ಲಿ 03 ಜನರನ್ನು ಬಂಧಿಸಿ, ಅಬಕಾರಿ ಕಾಯ್ದೆ ಮತ್ತು ನಿಯಮಗಳ ಅನುಸಾರ ಕ್ರಮ ತೆಗೆದು ಕೊಳ್ಳಲಾಗಿದೆ.

ಉ) ಕಳೆದ 02 ವರ್ಷಗಳಲ್ಲಿ ಕ್ಷೇತ್ರ ವ್ಯಾಪ್ತಿಯಲ್ಲಿ ಅನಧಿಕೃತ ಮದ್ಯಮಾರಾಟ ಮಾಡುತ್ತಿರುವವರ ವಿರುದ್ಧ 03 ಪ್ರಕರಣಗಳನ್ನು ದಾಖಲಿಸಲಾಗಿದೆ.

ಪ್ರಥಮ ದರ್ಜೆ ಕಾಲೇಜಿನಲ್ಲಿ ನೇಮಕಾತಿ

789 (1358) ಶ್ರೀ ಪಾಟೀಲ್ ಬಿ.ಸಿ. (ಹಿರೇಕೆರೂರು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರು ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ಹಲವು ವರ್ಷಗಳಿಂದ ಬೋಧಕ ಮತ್ತು

ಬೋಧಕೇತರ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ಮಂಜೂರಾದ ಹುದ್ದೆಗಳೆಷ್ಟು ಹಾಗೂ ಹಾಲಿ ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿ ಹುದ್ದೆಗಳೆಷ್ಟು;

ಇ) ರಾಜ್ಯದಲ್ಲಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಮಂಜೂರಾದ ಹುದ್ದೆಗಳೆಷ್ಟು ಹಾಗೂ ಹಾಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳೆಷ್ಟು;

ಈ) ಹಾಗಿದ್ದಲ್ಲಿ, ಈ ಖಾಲಿ ಹುದ್ದೆಗಳನ್ನು ತುಂಬುವ ವಿಚಾರ ಸರ್ಕಾರದ ಗಮನದಲ್ಲಿದೆಯೇ?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು.

ಆ)

ಕ್ರಮ ಸಂಖ್ಯೆ	ಪದನಾಮ	ಮಂಜೂರಾದ ಹುದ್ದೆ	ಭರ್ತಿಯಾದ ಹುದ್ದೆ	ಖಾಲಿ ಹುದ್ದೆ
01	ಬೋಧಕರು	18	16	02
02	ಗ್ರಂಥಪಾಲಕರು	01	0	01
03	ದೈಹಿಕ ಶಿಕ್ಷಣ ಬೋಧಕರು	01	0	01
04	ಮ್ಯಾನೇಜರ್	01	0	01
05	ಅಧೀಕ್ಷಕರು	01	0	01
06	ಪ್ರ. ದ. ಸಹಾಯಕರು	01	0	01
07	ದ್ವಿ.ದ.ಸಹಾಯಕರು	04	01	03
08	ಬೆರಳಚ್ಚುಗಾರರು	01	0	01
09	ಗ್ರಂಥಾಲಯ ಸಹಾಯಕರು	01	0	01
10	ಅಟೆಂಡರ್	2	0	02
11	ಸಹಾಯಕರು	2	0	02

ಇ)

ಕ್ರಮ ಸಂಖ್ಯೆ	ಪದನಾಮ	ಮಂಜೂರಾದ ಹುದ್ದೆ	ಭರ್ತಿಯಾದ ಹುದ್ದೆ	ಖಾಲಿ ಹುದ್ದೆ
01	ಬೋಧಕರು	5861	5065	796
02	ಗ್ರಂಥಪಾಲಕರು	342	168	174
03	ದೈಹಿಕ ಶಿಕ್ಷಣ ಬೋಧಕರು	298	95	203
04	ಮ್ಯಾನೇಜರ್	74	53	21
05	ಅಧೀಕ್ಷಕರು	305	303	02
06	ಪ್ರ.ದ. ಸಹಾಯಕರು	409	229	180
07	ದ್ವಿ.ದ.ಸಹಾಯಕರು	415	160	255
08	ಶೀಘ್ರಲಿಪಿಗಾರರು	13	07	06
09	ಹಿರಿಯ ಬೆರಳಚ್ಚುಗಾರರು	80	23	57
10	ಬೆರಳಚ್ಚುಗಾರರು	321	297	24
11	ವಾಹನ ಚಾಲಕರು	11	11	00
12	ಗ್ರಂಥಾಲಯ ಸಹಾಯಕರು	269	06	263
13	ಅಟೆಂಡರ್	1170	598	572
14	ಸಹಾಯಕರು	1334	483	851

ಈ) 190 ದೈಹಿಕ ಶಿಕ್ಷಣ ಬೋಧಕರು ಮತ್ತು 167 ಗ್ರಂಥಪಾಲ ಕರುಗಳ ಆಯ್ಕೆ ಪಟ್ಟಿಯನ್ನು ಕರ್ನಾಟಕ ಲೋಕಸೇವಾ ಆಯೋಗವು ಕ್ರಮವಾಗಿ ದಿನಾಂಕ: 10.02.2010 ಮತ್ತು 10.03.2010 ರಂದು ಸರ್ಕಾರಕ್ಕೆ ಸಲ್ಲಿಸಿದೆ. ಈ ಅಭ್ಯರ್ಥಿಗಳ ಪೊಲೀಸ್/ವೈದ್ಯಕೀಯ/ ಸಿಂಧುತ್ವ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟವರಿಂದ ಪಡೆದು ಸದ್ಯದಲ್ಲಿಯೇ ನೇಮಕಾತಿ ಆದೇಶ ನೀಡಲು ಕ್ರಮ ಕೈಗೊಳ್ಳಲಾಗುವುದು.